

WWF 50 YEARS IN INDIA

# ಒಂದು ಭೂಮಿ ಒಂದು ಮನೆ

## ಹಂತ ೧ – ಅನ್ವೇಷಿಸಿ ಮತ್ತು ಕಂಡು ಹಿಡಿಯಿರಿ

ತರಗತಿಗಳು ೩, ೪, & ೫

ಚಟುವಟಿಕೆ ಪುಸ್ತಕ

ಆತ್ಮೀಯ ಮಕ್ಕಳೇ,

***There is a tiny virus outside, which is not so nice***
***and we are all staying safe in our houses like little mice.***
***Don't we all wish we had something to do,***
***a run in the field or a game of peek-a-boo or stapoo.***
***So why just sit in the house and dilly-dally***
***Let's all gather for an activity with our family.***
***And One Earth - One Home is the best way***
***To spend your time exploring nature today.***
***So, hello and welcome to a journey of fun,***
***where only 3 steps are taken one by one.***

ನಮಸ್ತೇ, ಒಂದು ಭೂಮಿ – ಒಂದು ಮನೆ ಕಾರ್ಯಕ್ರಮಕ್ಕೆ ನಿಮಗೆ ಸ್ವಾಗತ! DwaAAIAA ªAAPAI¼EA,

ನಿಮ್ಮ ಮನೆಯಲ್ಲಿ ನೀವಷ್ಟೇ ಅಲ್ಲದೇ, ಇತರ ಜೀವಿಗಳೂ ಬದುಕುತ್ತಿವೆಯೆಂದು ನಿಮಗೆ ಗೊತ್ತೇ? ಸಕ್ಕರೆಯ ಸಮೀಪದ ಇರುವೆ ಅಥವಾ ಹತ್ತಿರದ ಮರದ ಮೇಲೆ ಕುಳಿತು ಹಾಡುತ್ತಿರುವ ಪಕ್ಷಿ ಅಥವಾ ತನ್ನ ಬಲೆಯಲ್ಲಿ ೧೮೦ ಡಿಗ್ರಿಯಲ್ಲಿ ನೇತಾಡುತ್ತಿರುವ ಜೇಡದಂತಹ ಕೆಲವನ್ನು ನೀವು ನೋಡಿರಬಹುದು.

ನಮ್ಮ ಗ್ರಹವಾದ ಭೂಮಿಯನ್ನು ನಾವು ಹತ್ತುಹಲವು ಸಸ್ಯ ಹಾಗೂ ಪ್ರಾಣಿಗಳೊಂದಿಗೆ ಹಂಚಿಕೊಂಡು ಬದುಕುತ್ತಿದ್ದೇವೆ. ಹಾಗಾಗಿ ಅವುಗಳು ಕಾಡುಗಳಲ್ಲಿರಲಿ ಅಥವಾ ನಮ್ಮ ಮನೆಯಲ್ಲೇ ಇರಲಿ, ನಮ್ಮ ಸಂಪನ್ಮೂಲಗಳನ್ನು ಜಾಗ್ರತೆಯಾಗಿ ಬಳಸುವ ಮೂಲಕ ನಾವು ಅವುಗಳನ್ನು ಗೌರವಿಸಬೇಕು.

ಆದ್ದರಿಂದ, ಈಗ ಎಲ್ಲರೂ ನಮ್ಮ ಮೋಜಿನ ಪ್ರಯಾಣವನ್ನು ಒಂದೊಂದಾಗಿ ಕೇವಲ ೩ ಹಂತಗಳೊಂದಿಗೆ ಪ್ರಾರಂಭಿಸೋಣ.



## ಹಂತ ೧ ಅನ್ವೇಷಿಸಿ ಮತ್ತು ಕಂಡು ಹಿಡಿಯಿರಿಈಖಓಆ



## ಹಂತ ೨ – ನೋಡಿ ಮತ್ತು ಕಲಿಯಿರಿ



## ಹಂತ ೩ – ಚರ್ಚಿಸಿ ಮತ್ತು ಮಾಡಿ

ಒಂದು ಆನಂದದ ಹಾಗೂ ಆರೋಗ್ಯಕರ ಗ್ರಹಕ್ಕಾಗಿ ನಾವು ಒಟ್ಟಾಗಿ ನಮ್ಮ ಮನೆಗಳನ್ನು ಎಂದೆಂದಿಗೂ ಹಸಿರಾಗಿರಿಸೋಣ.

## ಹೆತ್ತವರಿಗೆ/ಪೋಷಕರಿಗೆ ಸೂಚನೆ

**"ಒಂದು ಭೂಮಿ – ಒಂದು ಮನೆ", ಇದು, ವಾರಕ್ಕೆ ಕೇವಲ ೩೦ ನಿಮಿಷಗಳ ಸಮಯ ತೆಗೆದುಕೊಳ್ಳುವ ಚಟುವಟಿಕೆಗಳನ್ನೊಳಗೊಂಡ, ಹತ್ತು ವಾರಗಳ ಕಿರು ಕಾರ್ಯಕ್ರಮ.**

- ಕಾರ್ಯಹಾಳೆಗಳನ್ನು ಮುದ್ರಿಸಬಹುದು ಅಥವಾ ಒಂದು ಖಾಲಿ ಕಾಗದ/ಟಿಪ್ಪಣಿ ಪುಸ್ತಕದಲ್ಲಿ ಬರೆಯಬಹುದು.

- ಎಲ್ಲಾ ಚಟುವಟಿಕೆಗಳ ಸಮಯದಲ್ಲೂ ನಿಮ್ಮ ಮಕ್ಕಳೊಂದಿಗೆ ಇದ್ದು ಬೆಂಬಲಿಸಿ. ಕಾರ್ಯಹಾಳೆಗಳನ್ನು ಸಂಪೂರ್ಣಗೊಳಿಸಲು ಅವರಿಗೆ ಸಹಾಯ ಮಾಡಿ.

- ಪ್ರತಿಯೊಂದು ಚಟುವಟಿಕೆಯಲ್ಲಿಯೂ ಬೆಂಬಲವಾಗಿ, ಶಿಕ್ಷಕರಿಗೆ ವಾಟ್ಸ್‌ಆಪ್ ಮೂಲಕ ಕಳುಹಿಸಲಾಗುವ ಅಥವಾ ಪ್ರತಿಯೊಂದು ಕಾರ್ಯಹಾಳೆಯೊಂದಿಗೆ ನೀಡಲಾಗುವ ಸಂಪರ್ಕ ಕೊಂಡಿ (ಲಿಂಕ್)ಯ ಮೂಲಕ ಡೌನ್‌ಲೋಡ್ ಮಾಡಬಹುದಾದ
ಒಂದು ವೀಡಿಯೋ / ದೃಶ್ಯಚಿತ್ರವಿರುತ್ತದೆ.

- ಯಾವಾಗಲೂ ಅವರ ಚಿಕ್ಕ ಯಶಸ್ಸನ್ನೂ ಪ್ರೋತ್ಸಾಹಿಸಿ ಆನಂದಿಸಿ ಮತ್ತು ಉತ್ತಮ ಕೌಟುಂಬಿಕ ಸಮಯವನ್ನು ಒಂದಾಗಿ ಕಳೆಯಿರಿ.

## ಹಂತ ೧
### ಅನ್ವೇಷಿಸಿ ಮತ್ತು ಕಂಡು ಹಿಡಿಯಿರಿ

ರೆಡೀ, ವನ್ ಟೂ ತ್ರೀ, ಹೊರಡಿ!
ಈಗ 'ಒಂದು ಭೂಮಿ – ಒಂದು ಮನೆ' ಯ ಪ್ರಥಮ ಹಂತವನ್ನು ಕೈಗೊಳ್ಳುವ ಸಮಯ.
ಇದರಲ್ಲಿ ೩ ಕಾರ್ಯಹಾಳೆಗಳು ಹಾಗೂ ೩ ವೀಡಿಯೋಗಳಿರುತ್ತವೆ.

## ಪರಿವಿಡಿ

**ವೀಡಿಯೋ ವಿ೧ಎ: ಪರಿಸರ ಪರಿಸರ ಎಲ್ಲೆಡೆ ಪರಿಸರ!**
ಈ ವೀಡಿಯೋವನ್ನು ನೋಡುವುದರೊಂದಿಗೆ ವಸ್ತುತಃ ನಡೆಯುತ್ತಾ ದೃಶ್ಯಾತ್ಮಕವಾಗಿ ಪರಿಸರವನ್ನು ಶೋಧಿಸಿ.
(ಸಂಪರ್ಕ ಕೊಂಡಿಯನ್ನು ಇಲ್ಲಿ ನೀಡಬೇಕು).

**ಕಾರ್ಯಹಾಳೆ ಡಬ್ಲ್ಯೂ೧ಎ: ನನ್ನ ಪ್ರಕೃತಿ / ಪರಿಸರ ಪುಸ್ತಕ**
ಈ ದೃಶ್ಯಾತ್ಮಕ ವಸ್ತುತಃ ನಡಿಗೆಯಲ್ಲಿ ನೀವು ನೋಡಿರುವ ಎಲ್ಲಾ ಸಸ್ಯ ಮತ್ತು ಪ್ರಾಣಿಗಳ ಚಿತ್ರ ಬಿಡಿಸುವುದರೊಂದಿಗೆ
ನಿಮ್ಮ ಪರಿಸರ ಪುಸ್ತಕವನ್ನು ರಚಿಸಿ.

**ವೀಡಿಯೋ ವಿ೧ಬಿ: ಪ್ರಕೃತಿ ಪ್ರಿಯರು**
ನಿಮ್ಮ ಮನೆಯಲ್ಲಿರುವ ಹಾಗೂ ಸುತ್ತಮುತ್ತಲಿನ ಸಸ್ಯ ಮತ್ತು ಪ್ರಾಣಿಗಳ ಬಗ್ಗೆ ಒಂದು ದೃಶ್ಯಕಥೆ
(ಸಂಪರ್ಕ ಕೊಂಡಿಯನ್ನು ಇಲ್ಲಿ ನೀಡಲಾಗುತ್ತದೆ).

**ಕಾರ್ಯಹಾಳೆ ಡಬ್ಲ್ಯೂ೧ಬಿ: ಪರಿಸರದ ಪತ್ತೇದಾರರಾಗಿ!**
ನಿಮ್ಮ ಮನೆಯಲ್ಲಿ ಅಥವಾ ಸುತ್ತಮುತ್ತಲೂ, ಕಿಟಕಿ ಅಥವಾ ಮಹಡಿಯಿಂದ ನೀವು ನೋಡಬಹುದಾದ ಪ್ರಾಣಿಗಳನ್ನು ಕಂಡು ಹುಡುಕಿ.
ನಿಮ್ಮ ಮನೆ ಅಥವಾ ಪಕ್ಕದಲ್ಲಿ ಒಂದು ಚಿಕ್ಕ ಗಿಡ ಅಥವಾ ಹೂವನ್ನು ಚಿತ್ರಿಸಿ.

**ವೀಡಿಯೋ ವಿ೧ಸಿ: ಪ್ರಕೃತಿ ಮತ್ತು ದೇಶ**
ನಿಮ್ಮ ರಾಜ್ಯ ಮತ್ತು ಭಾರತದಲ್ಲಿರುವ ಸಸ್ಯ & ಪ್ರಾಣಿಗಳ ಕುರಿತು ತಿಳಿಯಲು ವಿಡೀಯೋವನ್ನು ನೋಡಿ
(ಸಂಪರ್ಕ ಕೊಂಡಿಯನ್ನು ಇಲ್ಲಿ ನೀಡಲಾಗುತ್ತದೆ).

**ಕಾರ್ಯಹಾಳೆ ಡಬ್ಲ್ಯೂ೧ಸಿ: ನನ್ನ ರಾಜ್ಯಪ್ರಾಣಿ ಮತ್ತು ಸಸ್ಯ**
ನಿಮ್ಮ ರಾಜ್ಯಪ್ರಾಣಿ ಮತ್ತು ಸಸ್ಯದ ಚಿತ್ರವನ್ನು ಬಿಡಿಸಿ.

**ಮರುಮನನ ಮತ್ತು ಇನ್ನಷ್ಟು**
ನೀವು ಕಲಿತಿರುವುದನ್ನು ಮರುಪರಿಶೀಲಿಸಿ ಮತ್ತು ವರದಿ ಮಾಡಿ.

ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿಗಳು) ಸಾಧಿಸಲು ಒಂದು ಭೂಮಿ – ಒಂದು ಮನೆ ಸಹಾಯ ಮಾಡುತ್ತದೆ.

ಹಂತ ೧ನ್ನು ಈ ಕೆಳಗಿನವುಗಳಿಗಾಗಿ ಮಾಡಲಾಗಿದೆ:

3 GOOD HEALTH AND WELL-BEING

೩ ಉತ್ತಮ ಆರೋಗ್ಯ ಮತ್ತು ಸುರಕ್ಷೆ

4 QUALITY EDUCATION

೪ ಗುಣಮಟ್ಟದ ಶಿಕ್ಷಣ

# ವೀಡಿಯೋ ವಿಭಾಗ

## ವೀಡಿಯೋದ ಸಮಯ
## ಪರಿಸರ ಪರಿಸರ ಎಲ್ಲೆಡೆ ಪರಿಸರ!

ವಸ್ತುತಃ ನಡಿಗೆಯ ಮೂಲಕ ಪ್ರಾರಂಭಿಸುವುದರೊಂದಿಗೆ ನಾವು, ಪ್ರಕೃತಿ ಶೋಧನೆ ಮಾಡೋಣ. ಈ ಸಂಪರ್ಕ ಕೊಂಡಿಯ ಮೂಲಕ ವೀಡಿಯೋವನ್ನು ನೋಡುವುದು.






# ನನ್ನ ಪರಿಸರ ಪುಸ್ತಕ

ವೀಡಿಯೋದಲ್ಲಿ ನೀವು ನೋಡಿದ ಎಲ್ಲಾ ವಿಷಯಗಳನ್ನೂ ಚಿತ್ರಬಿಡಿಸಿ!

೧. ಬಣ್ಣಗಳು

೨. ಒಂದು ದೊಡ್ಡಪ್ರಾಣಿ

೩. ಒಂದು ಪುಟ್ಟಸಸ್ಯ

೪. ಒಂದು ಮರ

೫. ಒಂದು ಸಣ್ಣಪ್ರಾಣಿ

೬. ಒಂದು ಪಕ್ಷಿ

## ಆ ಶಬ್ದವನ್ನು ಊಹಿಸಿ

ವೀಡಿಯೋದಲ್ಲಿ ನೀವು ಕೇಳಿದ ಶಬ್ದಗಳನ್ನು ಪುನರಾವರ್ತಿಸಿ. ಆ ಶಬ್ದದ ಮೂಲವನ್ನು ನಿಮಗೆ ಗುರುತಿಸಲು ಸಾಧ್ಯವೇ? ನಿಮ್ಮ ಉತ್ತರವನ್ನು ಬರೆಯಿರಿ ಅಥವಾ ಚಿತ್ರಬಿಡಿಸಿ.

## ವಾಸನೆಯನ್ನು ಊಹಿಸಿ

ವೀಡಿಯೋವನ್ನು ಗಮನವಿಟ್ಟು ನೋಡಿ. ಹೂವಿನ ವಾಸನೆಯು ಹೇಗಿರಬಹುದೆಂದು ನಿಮಗನ್ನಿಸುತ್ತದೆ? ಅದನ್ನು ಬರೆಯಿರಿ.

# ವೀಡಿಯೋ ವಿಭಾಗ

## ವೀಡಿಯೋದ ಸಮಯ
## ಪ್ರಕೃತಿ ಪ್ರಿಯರು

ನಿಮ್ಮ ಮನೆಯಲ್ಲಿರುವ ಮತ್ತು ಹೊರಗಿರುವ ಸಸ್ಯ ಹಾಗೂ ಪ್ರಾಣಿಗಳ ಚಿತ್ರಕಥೆಯನ್ನು ನೋಡಿ.






# ಕಾರ್ಯಹಾಳೆ

## ಪರಿಸರದ ಪತ್ತೇದಾರರಾಗಿ!

ನಮ್ಮ ಮನೆಗೆ ಹಲವು ಪ್ರಾಣಿಗಳು ಭೇಟಿ ನೀಡುತ್ತವೆ ಹಾಗೂ ಅವುಗಳಲ್ಲಿ ಕೆಲವು ನಮ್ಮ ಮನೆಯ ಗುಪ್ತ ಸದಸ್ಯರಾಗುತ್ತವೆ. ನಿಮ್ಮ ಮನೆಯ ಸುತ್ತಮುತ್ತ ಅವುಗಳನ್ನು ಹುಡುಕಿ ಅಥವಾ ನಿಮ್ಮ ಮನೆ ಕಿಟಕಿಯ ಮೂಲಕ ನೋಡುತ್ತಾ ಅವುಗಳನ್ನು ಪತ್ತೆ ಮಾಡಿ.


ನೀವು ಗುರುತಿಸಿದ ಎಲ್ಲಾ ಜೀವಿಗಳ ಕ್ರಮಸಂಖ್ಯೆಯನ್ನು ನಿಮ್ಮ ಕಾರ್ಯಹಾಳೆ ಅಥವಾ ಟಿಪ್ಪಣಿ ಪುಸ್ತಕದಲ್ಲಿ ಬರೆಯಿರಿ ಅಥವಾ ಗುರುತಿಸಿ.

೧. ನೊಣ




☐

೨. ಜಿರಲೆ




☐

೩. ಸೊಳ್ಳೆ




☐

೪. ತಿಗಣೆಗಳು




☐

೫. ಹುಳಗಳು



☐

೬. ಗೆದ್ದಲು




☐

೭. ಏರೋಪ್ಲೇನ್ ಚಿಟ್ಟೆ / ಕೊಡತಿ ಕೀಟ




☐

೮. ಪಾತರಗಿತ್ತಿ / ಚಿಟ್ಟೆ




☐

೯. ಹಲ್ಲಿ




☐

೧೦. ಜೀರುಂಡೆ



☐

೧೧. ಇರುವೆ



☐

೧೨. ಜೇನ್ನೊಣ



☐

೧೩. ಕಣಜ



☐

೧೪. ಜೇಡ




☐

೧೫. ಸುಂಡಿಲಿ / ಇಲಿ



☐

೧೬. ಅಳಿಲು




☐

೧೭. ಯಾವುದೇ ಪಕ್ಷಿ



☐


೧೮. ನಾಯಿ



☐

ನೀವು ನೋಡಿರುವ ಅತ್ಯಂತ ಕುತೂಹಲಕಾರಿ ಜೀವಿಯ ಚಿತ್ರ ಹಾಗೂ ಅದನ್ನು ನೀವು ನೋಡಿದ ಸ್ಥಳವನ್ನು ಬರೆಯಿರಿ. ಮಾದರಿ ಚಿತ್ರವನ್ನು ನೋಡಿ.

ಮಾದರಿ ಚಿತ್ರ



ವೀಡಿಯೋ ವಿಗಸಿ

# ವೀಡಿಯೋದ ಸಮಯ
## ಪ್ರಕೃತಿ ಮತ್ತು ದೇಶ

ಭಾರತದಲ್ಲಿ ಹಲವಾರು ಸಸ್ಯ ಹಾಗೂ ಪ್ರಾಣಿಗಳಿವೆ. ಅವುಗಳ ಬಗ್ಗೆ ಇನ್ನಷ್ಟು ಅರಿಯಲು ಈ ವೀಡಿಯೋವನ್ನು ನೋಡಿ.






# ಕಾರ್ಯಹಾಳೆ

## ನನ್ನ ರಾಜ್ಯ ಸಸ್ಯ ಮತ್ತು ಪ್ರಾಣಿ

(ನಿಮ್ಮ ರಾಜ್ಯದ ಹೆಸರು)

ನಾನು ________________________ ದಲ್ಲಿ ವಾಸಿಸುತ್ತಿದ್ದೇನೆ.

ಚಿತ್ರ ಬಿಡಿಸೋಣ.

ನನ್ನ ರಾಜ್ಯವೃಕ್ಷ

ನನ್ನ ರಾಜ್ಯವೃಕ್ಷ


ನನ್ನ ರಾಜ್ಯಪಕ್ಷಿ

ನನ್ನ ರಾಜ್ಯಪುಷ್ಪ


## ಮರುಮನನದ ಸಮಯ!

ಅಭಿನಂದನೆಗಳು! ನೀವು ೧ನೆಯ ಹಂತವನ್ನು ಪೂರ್ಣಗೊಳಿಸಿದ್ದೀರಿ.


ನಾವು ಇಲ್ಲಿಯವರೆಗೆ ಏನನ್ನು ಕಲಿತಿದ್ದೇವೆ ನೋಡೋಣ! ಈ ಕೆಳಗಿನ ತಪಶೀಲು ಪಟ್ಟಿಯಲ್ಲಿ ನಿಮಗೆ ಈಗ ತಿಳಿದಿರುವ ಎಲ್ಲಾ ವಿಚಾರಗಳ ಎದುರು ಕ್ರಮ ಸಂಖ್ಯೆಗಳನ್ನು ಬರೆಯಿರಿ ಅಥವಾ ಗುರುತಿಸಿ.



೧. ನನ್ನ ಸುತ್ತಮುತ್ತ ಬಹಳಷ್ಟು ಸಸ್ಯ ಮತ್ತು ಪ್ರಾಣಿಗಳಿವೆ.




೨. ನನ್ನ ಮಹಡಿ ಮತ್ತು ಕಿಟಕಿಯಿಂದ ಪಕ್ಷಿಗಳನ್ನು ನೋಡಬಹುದು.




೩. ನನ್ನ ರಾಜ್ಯ ಪ್ರಾಣಿಯ ಬಗ್ಗೆ ನನಗೆ ತಿಳಿದಿದೆ.



೪. ನನ್ನ ರಾಜ್ಯ ಪ್ರಾಣಿಯ ಬಗ್ಗೆ ನನಗೆ ತಿಳಿದಿದೆ.



೫. ನನ್ನ ರಾಜ್ಯ ಪುಷ್ಪದ ಬಗ್ಗೆ ನನಗೆ ತಿಳಿದಿದೆ.



೬. ನನ್ನ ರಾಜ್ಯ ಪಕ್ಷಿಯ ಬಗ್ಗೆ ನನಗೆ ತಿಳಿದಿದೆ.